ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಪೂರ.

**ಸಿ.ಸಿ. ನಂಃ 3265/2024**

ಫಿರ್ಯಾಧಿಕಾರಃ ಕರ್ನಾಟಕ ಸರ್ಕಾರದ ಪರವಾಗಿ ಶಹಾಪೂರ ಪೊಲೀಸಠಾಣೆ

// ವಿರುದ್ಧ //

ಆರೋಪಿಗಳು ಃ ಪರಸಪ್ಪ ಮತ್ತು ಇತರರು

ದೋಷಾರೋಪಣೆ

ನಾನು ಶ್ರೀಮತಿ. ಶೋಭಾ ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳು, ಶಹಾಪೂರ,

ಆರೋಪಿತರು.

1. ಪರಸಪ್ಪ ತಂದೆ ದುರ್ಗಪ್ಪ ಕೋರಂ, ವಯಸ್ಸುಃ 48 ವರ್ಷ, ಉದ್ಯೋಗಃ ಕೂಲಿ, ಸಾಃ ಹಳೆ ತಹಸೀಲ್ ಆಫೀಸ್ ಹತ್ತಿರ ಶಹಾಪೂರ.
2. ಹುಸೇನ್ ತಂದೆ ಸುಂಕಪ್ಪ ಕೋರಂ, ವಯಸ್ಸುಃ 42 ವರ್ಷ, ಉದ್ಯೋಗಃ ಕೂಲಿ, ಸಾಃ ಹಳೆ ತಹಸೀಲ್ ಆಫೀಸ್ ಹತ್ತಿರ ಶಹಾಪೂರ.
3. ನಾಗಮ್ಮ ಗಂಡ ಪರಸಪ್ಪ ಕೋರಂ, ವಯಸ್ಸುಃ 42 ವರ್ಷ, ಉದ್ಯೋಗಃ ಕೂಲಿ, ಸಾಃ ಹಳೆ ತಹಸೀಲ್ ಆಫೀಸ್ ಹತ್ತಿರ ಶಹಾಪೂರ.
4. ಯಲ್ಲಮ್ಮ ಗಂಡ ಹುಸೇನ್ ಕೋರಂ, ವಯಸ್ಸುಃ 38 ವರ್ಷ, ಉದ್ಯೋಗಃ ಕೂಲಿ, ಸಾಃ ಹಳೆ ತಹಸೀಲ್ ಆಫೀಸ್ ಹತ್ತಿರ ಶಹಾಪೂರ.

ಆದ ನಿಮ್ಮ ಮೇಲೆ ಈ ಮೂಲಕ ಕೆಳಕಂಡಂತೆ ಆರೋಪಕ್ಕೆ ಗುರಿಪಡಿಸುತ್ತೇನೆ.

ಮೊದಲನೆದಾಗಿ ದಿನಾಂಕಃ 19.08.2024 ರಂದು ಬೆಳಿಗ್ಗೆ 06.20 ಗಂಟೆಗೆ ಪೊಲೀಸಠಾಣಾ ವ್ಯಾಪ್ತಿಯಲ್ಲಿ ಬರುವ ಶಹಾಪೂರ ನಗರದ ಹಳಿಸಗರ ಏರಿಯಾದ ಅಗ್ನಿಶಾಮಕ ಠಾಣೆಯ ಹಿಂದುಗಡೆ ಚಾಸಾ-1 ರವರು ತಮ್ಮ ಮನೆಯ(ಜೋಪಡಿ) ಹತ್ತಿರ ಇದ್ದಾಗ ಆರೋಪಿತರಾದ ನೀವು ಅವಚ್ಯವಾಗಿ ಬೈಯುತ್ತಾ 2 ನೇ ಆರೋಪಿಯಾದ ನೀನು ಕೈಯಿಂದ ಹೊಟ್ಟೆಗೆ ಹಾಗೂ ಬೆನ್ನಿಗೆ ಹೊಡೆದು ಗುಪ್ತಗಾಯ ಪಡಿಸಿದ್ದು, 3 ಮತ್ತು 4 ನೇ ಆರೋಪಿತರಾದ ನೀವು ಚಾಸಾ-1 ರವರು ನೆಲಕ್ಕೆ ಬಿದ್ದು ಚಿರಾಡುತ್ತಿದ್ದಾಗ ಅವಾಚ್ಯವಾಗಿ ಬೈಯುತ್ತಾ ಕಾಲಿನಿಂದ ಒದ್ದಿದ್ದು. ಈ ಮೂಲಕ ಭಾ.ನ್ಯಾ.ಸಂ. ಕಲಂ. 115(2) ಸಹವಾಚಕ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಎರಡನೇದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯ ಹಾಗೂ ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ **1** ನೇ ಆರೋಪಿತರಾದ ನೀನು ಚಾಸಾ-**1** ರವರಿಗೆ ಅವಾಚ್ಯವಾಗಿ ಬೈಯುತ್ತಾ ಕೂದಲು ಹಿಡಿದು ಎಳೆದಾಡಿ ನೆಲಕ್ಕೆ ಕೆಡವಿ ಕಲ್ಲನ್ನು ತೆಗೆದುಕೊಂಡು ಹಣೆಯ ಮೇಲಿನ ತಲೆಗೆ ಹೊಡೆದು ರಕ್ತಗಾಯ ಪಡಿಸಿದ್ದು. ಈ ಮೂಲಕ ನೀನು ಭಾ.ನ್ಯಾ.ಸಂ. ಕಲಂ **118(1)** ಸಹವಾಚಕ **3(5)** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಮೂರನೇದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯ ಹಾಗೂ ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ **1** ಮತ್ತು **2** ನೇ ಆರೋಪಿತರಾದ ನೀವು ಚಾಸಾ-**1** ರವರಿಗೆ ಅವಾಚ್ಯವಾಗಿ ಬೈಯುತ್ತಾ ತಲೆಯ ಕೂದಲು ಹಾಗೂ ಸೀರೆ ಹಿಡಿದು ಎಳೆದಾಡಿ ಮಾನಭಂಗ ಮಾಡಲು ಪ್ರಯತ್ನ ಮಾಡಿದ್ದು. ಈ ಮೂಲಕ ಭಾ.ನ್ಯಾ.ಸಂ. ಕಲಂ. **74** ಸಹವಾಚಕ **3(5)** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನಾಲ್ಕನೇದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯ ಹಾಗೂ ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ ಆರೋಪಿತರಾದ ನೀವು ಚಾಸಾ-**1** ರವರಿಗೆ ಏನಲೇ ರಂಡಿ ನಿಮ್ಮ ಹಿಂದೆ ಕಬ್ಬಲಿಗ ಜನಾಂಗದವರು ಇದ್ದಾರೆ ಅಂತ ನಮ್ಮ ತಂಟೆಗೆ ಬಂದರೆ ನಿನಗೂ ಹಾಗೂ ನಿನ್ನ ಗಂಡನಿಗೂ ಬಿಡುವುದಿಲ್ಲ ಸೂಳೆ ಅಂತ ಬೈದಿದ್ದು, **1** ನೇ ಆರೋಪಿಯಾದ ನೀನು ಚಾಸಾ-**1** ರವರಿಗೆ ಬಿಡಬ್ಯಾಡ ಈ ಸೂಳೆಗೆ ಅಂತ ಬೈದಿದ್ದು, **2** ನೇ ಆರೋಪಿಯಾದ ನೀನು ಈ ಸೂಳೆಯ ಸೊಕ್ಕು ಬಹಳ ಆಗಿದೆ ಅಂತ ಬೈದಿದ್ದು, **3** ಮತ್ತು **4** ನೇ ಆರೋಪಿತರಾದ ನೀವು ಎಲೇ ಸೂಳಿ ನಿನ್ನ ಗಂಡ ಎಲ್ಲಿದ್ದಾನೆ ಅಂತ ಅವಾಚ್ಯವಾಗಿ ಬೈದಿದ್ದು. ಈ ಮೂಲಕ ಭಾ.ನ್ಯಾ.ಸಂ. ಕಲಂ **352** ಸಹವಾಚಕ **3(5)** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಐದನೇದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯ ಹಾಗೂ ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ ಆರೋಪಿತರಾದ ನೀವು ಚಾಸಾ-**1** ಮತ್ತು ಚಾಸಾ-**6** ರವರಿಗೆ ಇನ್ನು ಮುಂದೆ ನೀವು ನಮ್ಮ ತಂಟೆಗೆ ಬಂದರೆ ನಿಮ್ಮ ಜೀವ ಸಹಿತ ಬಿಡುವುದಿಲ್ಲ ಅಂತ ಜೀವದ ಭಯ ಹಾಕಿ ಹೋಗಿದ್ದು. ಈ ಮೂಲಕ ಭಾ.ದಂ.ಸಂ. ಕಲಂ **351(2)** ಸಹವಾಚಕ **3(5)** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಮತ್ತು ನಾನು ಈ ಮೇಲ್ಕಂಡ ಆರೋಪಗಳಿಗೆ ನಿಮ್ಮನ್ನು ವಿಚಾರಣೆಗೆ ಒಳಪಡಿಸಲು ಈ ಮೂಲಕ ನಿರ್ದೇಶಿಸುತ್ತೇನೆ.

**ಪ್ರಶ್ನೆ-1ಃ ಮೇಲೆ ಓದಿ ಹೇಳಿದ ಆಪಾದನೆ/ದೋಷಾರೋಪಣೆ ತಿಳಿಯಿತೆ ಅಥವಾ ಅರ್ಥವಾಯಿತೇ?**

**1 ರಿಂದ 4 ನೇ ಆರೋಪಿತರ ಉತ್ತರಃ**

**ಪ್ರಶ್ನೆ-2ಃ ನೀವು ತಪ್ಪೊಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗ ಬಯಸುವಿರಾ?**

**1 ರಿಂದ 4 ನೇ ಆರೋಪಿತರ ಉತ್ತರಃ**

**(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಲಾಯಿತು.)**

**ದಿನಾಂಕಃ 16-09-2025**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.ಗಳು, ಶಹಾಪೂರ**

**ಆರೋಪಿತರ ಸಹಿ**

**1.**

**2.**

**3.**

**4.**